Sl.No. 1074

M-8765

Total No. of Pages : 3

# ಮೂರನೆಯ ಚತುರ್ಮಾಸ ಬಿ.ಎ./ಬಿ.ಪಿ.ಎ. ಪರೀಕ್ಷೆ, ಅಕ್ಟೋಬರ್/ನವೆಂಬರ್ 2019
## (ಸ್ಕೀಮ್ : ಚತುರ್ಮಾಸ-ಸಿಬಿಸಿಎಸ್)
## ಐಚ್ಛಿಕ ಕನ್ನಡ (ಪತ್ರಿಕೆ-೩)
## ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪೂರಕ ಪಠ್ಯ

**Time : 3 Hours** **Max. Marks : 80**

*Instruction :* 2019-20 ನೇಯ ಸಾಲಿನ ಸಿಬಿಸಿಎಸ್ ವಿದ್ಯಾರ್ಥಿಗಳಿಗೆ.

### ಭಾರತೀಯ ಕಾವ್ಯ ಮೀಮಾಂಸೆ (50 ಅಂಕಗಳು)

ಪ್ರ1) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಭಾರತೀಯ ಕಾವ್ಯ ಮೀಮಾಂಸೆಯು ನಡೆದು ಬಂದ ದಾರಿಯನ್ನು ಸವಿವರವಾಗಿ ನಿರೂಪಿಸಿ.

೨) ಕಾವ್ಯದ ಆಕರ ಯಾವುದು? ಸೋದಾಹರಣವಾಗಿ ವಿವರಿಸಿ.

ಪ್ರ2) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಅಲಂಕಾರ ಸಿದ್ಧಾಂತದ ಸ್ಥಾನವೇನು? ವಿವರಿಸಿ.

೨) ಕಾವ್ಯ ಪ್ರಯೋಜನಗಳಾವುವು? ಮಮ್ಮಟನ ಅಭಿಪ್ರಾಯದ ಹಿನ್ನೆಲೆಯಿಂದ ವಿವರಿಸಿ.

ಪ್ರ3) ಒಂದು ಪ್ರಶ್ನೆಗೆ ಉತ್ತರಿಸಿ. [10

೧) ಧ್ವನಿ ಪ್ರಕಾರಗಳಾವುವು? ಸೋದಾಹರಣವಾಗಿ ವಿವರಿಸಿ.

೨) ಭರತನ ರಸಸೂತ್ರದ ಮೇಲೆ ನಡೆದಿರುವ ವ್ಯಾಖ್ಯಾನಗಳನ್ನು ವಿವರಿಸಿ.

ಪ್ರ4) ಎರಡು ಪ್ರಶ್ನೆಗಳಿಗೆ ಉತ್ತರಿಸಿ: [2×5=1

೧) ರಸಗಳು ಯಾವುವು? ಒಂದನ್ನು ವಿವರಿಸಿ.

೨) ವಕ್ರೋಕ್ತಿ ತತ್ತ್ವವನ್ನು ಪರಿಚಯಿಸಿ.

೩) ಸಹೃದಯನ ಮಹತ್ವಗಳೇನು?

೪) ಕಾವ್ಯ ಲಕ್ಷಣಗಳನ್ನು ಕುರಿತು ಬರೆಯಿರಿ.

*P.T.O.*

Scanned by CamScanner

ಪ್ರ5) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2×5=10]

೧) ಭರತ

೨) ಉಪಮೆ

೩) ಅಭಿನವಗುಪ್ತ

೪) ಕವಿ

**ಪೂರಕ ಪಠ್ಯ (30 ಅಂಕಗಳು)**

ಪ್ರ6) ಅ) ಒಂದು ಕಾವ್ಯಭಾಗದ ವಿಶೇಷತೆಯನ್ನು ಗುರುತಿಸಿ: [5]

೧) ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲದಪೆಯಣ್ಣ ಸೊವ್ವಿಡೆಯಲಪ್ಪುದು ಕಾಣಾ ಮಹಾಜಿರಂಗದೊಳ್

೨) ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ

ಆ) ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ: [5 × 1 = 5]

೧) 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗ"- ಈ ಸಾಲಿನಲ್ಲಿ ಯಾವ ಅಲಂಕಾರ ಬಳಕೆಯಾಗಿದೆ?

೨) ಎತ್ತಿಬಹ ಸತ್ತಿಗೆಯ ಮೊತ್ತಂಗಳೆತ್ತಲುಂ-ಇಲ್ಲಿನ ಅಲಂಕಾರವನ್ನು ಹೆಸರಿಸಿ.



Scanned by CamScanner

೩) ಕೂಸು ಇದ್ದ ಮನೆಗೆ ಯಾವುದರ ಅವಶ್ಯಕತೆಯಿಲ್ಲ?

೪) "ನನಗೇನಾರ ಕೋಪ ಬಂದ್ರೆ ನಂ ನಂ ಪ್ರೀತಿ ನೆಪ್ಪ"–ಇದನ್ನು ಯಾವ ಕವಿತೆಯಿಂದ ಆರಿಸಿಕೊಳ್ಳಲಾಗಿದೆ?

೫) "ಅಳುವ ಕಂದನ ತುಟಿಯು ಹವಳದ ಕುಡಿಯಂಗ"– ಈ ವಾಕ್ಯದಲ್ಲಿ ಉಪಮಾನ ಯಾವುದು?

[10]

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ:

೧) 'ಜನಪದ ಕಾವ್ಯ'ದಲ್ಲಿ ವ್ಯಕ್ತವಾಗಿರುವ ವಿವಿಧ ಅಲಂಕಾರ ಧ್ವನಿಗಳನ್ನು ಗುರುತಿಸಿ ಮತ್ತು ವ್ಯಾಖ್ಯಾನಿಸಿ.

೨) ದ.ರಾ. ಬೇಂದ್ರೆ ಅವರ 'ಬೆಳಗು' ಕವನದಲ್ಲಿ ಅನುಭವಕ್ಕೆ ಬರುವ ಶಾಂತರಸದ ಸ್ವರೂಪವನ್ನು ವಿವರಿಸಿ.

[2×5=10]

ಪ್ರ8) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:

೧) ತೊಟ್ಟೀಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳಾ–ಈ ತ್ರಿಪದಿಯಲ್ಲಿ ಕಂಡುಬರುವ 'ಸ್ವಭಾವೋಕ್ತಿ'ಯನ್ನು ವ್ಯಾಖ್ಯಾನಿಸಿ.

೨) ಶೃಂಗಾರ ರಸದ ಹಿನ್ನೆಲೆಯಲ್ಲಿ 'ನನ್ ಪುಟ್ನಂಜೀ ರೂಪ'ವನ್ನು ವಿವರಿಸಿ.

೩) ಅಲಂಕಾರ ಮತ್ತು ರಸ ಪ್ರಜ್ಞೆಯ ಹಿನ್ನೆಲೆಯಿಂದ 'ಹಳ್ಳಿಯ ಚೆಲುವೆಗೆ'ಯನ್ನು ಪರಿಚಯಿಸಿ.

೪) 'ಕುಂತಿಯ ಬೆಳಗು' ಕವಿತೆಯಲ್ಲಿನ ವಸ್ತುಧ್ವನಿಯನ್ನು ಗುರುತಿಸಿ.

❖❖❖

Scanned by CamScanner